**ವ್ಯಾಖ್ಯಾನ**

# ತ್ರಿವಿಧ ಜೀವರಿಹರು ಜಗದೊಳಗೆ

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 64. And

**ಶ್ರೀ ಪುರಂದರ ದಾಸರ ಉಗಾಭೋಗದ ಚಿಂತನೆ:**

ಹರಿದಾಸರ ಉಗಾಭೋಗಗಳು ಗಾತ್ರದಲ್ಲಿ ಚಿಕ್ಕದಾದರೂ ಪಾತ್ರ (ಅರ್ಥದಲ್ಲಿ) ಹಿರಿದಾದುದು. ಬಾಲಕೃಷ್ಣ ತನ್ನ ಚಿಕ್ಕ ಬಾಯಲ್ಲಿ ಬ್ರಹ್ಮಾಂಡ ತೋರಿದಂತೆ, ಚಿಕ್ಕ–ಚೊಕ್ಕ ಪದಗಳಲ್ಲಿ ತಮ್ಮ ಅರ್ಥಗಾಂಭೀರ್ಯವನ್ನು ತುಂಬಿರುವರು. ಅದಕ್ಕೆಂದೆ ಉಗಾಭೋಗ ಪಠಣದ ಫಲವು ಎಲ್ಲಕ್ಕೂ ಮಿಗಿಲಾದದ್ದು. ಹರಿದಾಸರ ಸಾಹಿತ್ಯ ಭಂಡಾರದಲ್ಲಿ ಸಾಮಾನ್ಯವಾಗಿ ಎಲ್ಲ ಹರಿದಾಸರ ಉಗಾಭೋಗಗಳು ಸೇರಿವೆ. ಉಪಲಬ್ಧ ಉಗಾಭೋಗಗಳಲ್ಲಿ ಶ್ರೀಪುರಂದರದಾಸರದ್ದೆ ಹೆಚ್ಚಿನದ್ದೆಂದು ತಿಳಿಯುತ್ತದೆ. ವೇದಾಂತದಲ್ಲಿಯ ಪ್ರಕರಣಗಳಂತೆ ಈ ಉಗಾಭೋಗಗಳೂ ಒಂದೊಂದು ಪ್ರಮೇಯ ವಿಷಯಗಳ ಬಗ್ಗೆ ಮಾಹಿತಿ, ಸಾಮಾಜಿಕ, ಲೌಕಿಕ ವಿಷಯಗಳನ್ನೊಳಗೊಂಡಿರುತ್ತದೆ. ಇದಕ್ಕೊಂದು ಉದಾಹರಣೆಯಾಗಿ ಈ ಕೆಳಗಿನ ಉಗಾಭೋಗವಿದೆ. ಶ್ರೀಮದಾಚಾರ್ಯರು ಪ್ರತಿಪಾದಿಸಿದ ಪ್ರಧಾನ ತತ್ತ್ವಗಳನ್ನು ಇಲ್ಲಿ ಪುರಂದರದಾಸರು ಪಂಚಭೇದದ ಬಗ್ಗೆ ಸಂಗ್ರಹಿಸಿ ಎಲ್ಲರಿಗೂ ತಿಳಿಯುವಂತಾಗಿಸಿರುವರು.

**ತ್ರಿವಿಧ ಜೀವರಿಹರು ಜಗದೊಳಗೆ**
**ಭವ ವಿಮೋಕ್ಷ ಅವರವರ ಗತಿಗಳು**
**ಜೀವ–ಜೀವರಿಗೆ ಭೇದ ಜೀವ–ಜಡರಿಗೆ ಭೇದ**
**ಜಡ–ಜಡಕೆ ಭೇದ ಜಡ–ಪರಮಾತ್ಮಂಗೆ ಭೇದ**
**ಇಂತು ಜ್ಞಾನವು ನಿತ್ಯವಾಗಲೆಂದು ಸಂತತ**
**ವರದ ಶ್ರೀಪತಿ ಪುರಂದರವಿಠಲರೇಯ**
**ಇಂತು ಜ್ಞಾನವು ನಿತ್ಯವಾಗಲಿ ಎನಗೆ ॥**

ಶ್ರೀವ್ಯಾಸರಾಜರು **'ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ'** ಎಂದು ಹೇಳಿದ್ದರ ವಿವರಣೆ ರೂಪದಲ್ಲಿ ದಾಸರು ಈ ಉಗಾಭೋಗದಲ್ಲಿ ಸಂಗ್ರಹಿಸಿರುವರು. ಜೀವರಲ್ಲಿ ಅನಾದಿಕಾಲದಿಂದಲೂ ತಾರತಮ್ಯವಿರುವುದನ್ನು ಅಲ್ಲದೆ ಜೀವಸ್ವರೂಪವೇ ಇದಕ್ಕೆ ಕಾರಣವೂ ಆಗಿದೆ ಎನ್ನುವರು. ಜೀವ ತ್ರೈವಿಧ್ಯೆಯನ್ನು ವೇದಾನುಸಾರಿಯಾಗಿರುವುದನ್ನು ತಿಳಿಸುವರು. ಮೂರುವಿಧ ಜೀವರು. ಸಾತ್ವಿಕ, ರಾಜಸ ಮತ್ತು ತಾಮಸರೆಂದು. ಶ್ರೀಕೃಷ್ಣ ಗೀತೆಯಲ್ಲಿ **'ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ'** ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳು ಈ ಜಡ ಪ್ರಕೃತಿಯಿಂದ ಹುಟ್ಟಿರುವುದು. ಇದರಂತೆ ಗುಣಗಳನ್ನು ಹೊಂದಿದ ಜೀವರು ಈ ಸೃಷ್ಟಿಯಲ್ಲಿರುವರು. ಈ ಗುಣಗಳಿಗೆ ಅನುಗುಣವಾಗಿ ಅಂತ್ಯದಲ್ಲಿ ಅವರು ಗತಿಯನ್ನು ಪಡೆಯುವರು. ಇದು ವಿಧಿನಿಯಮ ಎಂದರು. ಈ ಜೀವತ್ರೈವಿಧ್ಯವನ್ನೇ ದಾಸರು **'ತ್ರಿವಿಧ ಜೀವರಿಹರು ಜಗದೊಳಗೆ'** ಎಂದದ್ದು. ಈ ಗುಣಗಳಿಗೆ ಶ್ರೀ, ಭೂ ಮತ್ತು ದುರ್ಗಾದೇವಿಯರ ಅಭಿಮಾನಿ ದೇವತೆಗಳು. ನೀಚೋಚ್ಚಭಾವವನ್ನು ಹೊಂದಿರುವ ಈ ಜೀವರು ನಿಯಮೇನ ಭಗವಂತನ ಅನುಚರರಾಗಿರುವರು.

ಇನ್ನು ಈ ಜೀವರಲ್ಲಿಯ ತಾರತಮ್ಯದ ಬಗ್ಗೆ ಶ್ರೀಮದಾಚಾರ್ಯರು ಈ ಪ್ರಪಂಚವು ಭೇದ ಪಂಚಕದಿಂದ ಕೂಡಿರುವುದಾಗಿದೆ ಎಂದರು. ಅದನ್ನೇ

**ಜೀವೇಶ್ವರ ಭಿದಾ ಚೈವ ಜಡೇಶ್ವರಭಿದಾ ತಥಾ ।**
**ಜೀವ ಭೇದೋ ಮಿಥಶ್ಚೈವ ಜಡಜೀವಭಿದಾ ತಥಾ ।**
**ಮಿಥಶ್ಚ ಜಡ ಭೇದೋಽಯಂ ಪ್ರಪಂಚೋ ಭೇದಪಂಚಕಃ ॥**

ಇದರ ಅನುವಾದ ರೂಪದಲ್ಲಿ ಶ್ರೀಪುರಂದರರ ಉಗಾಭೋಗವಿದೆ ಎಂದು ತಿಳಿಯಬೇಕು. ಇವರೇ ಮತ್ತೊಂದು ಕಡೆ ಹೇಳುವಾಗ –

**ಜೀವ ಜೀವಕೆ ಭೇದ ಜಡ ಜಡಕೆ ಭೇದ**
**ಜೀವ ಜಡ ಪರಮಾತ್ಮರಿಗೆ ಭೇದ**
**ಸಂಸಾರದೊಳು ಭೇದ ಮುಕ್ತರೊಡೆಯ**
**ಹರಿಭಕ್ತರಾಧೀನ ಜಗತ್ಕರ್ತೃನೀ ಸಲಹಯ್ಯ ಪುರಂದರವಿಠಲ ॥**

ಎಂದು ಭೇದಪಂಚಕವನ್ನು ಸಂಗ್ರಹಿಸಿ ತಿಳಿಸಿದರು. ಇಲ್ಲಿ ತಿಳಿಸಲಾದ ಭೇದವೆಂದರೆ ಜೀವರಲ್ಲಿ ವ್ಯತ್ಯಾಸ – ತಾರತಮ್ಯವೆಂದು. ಜೀವ – ಜಡ – ಪರಮಾತ್ಮರಲ್ಲಿಯ ಅಂತರವೂ ಭೇದವೆನಿಸಿದೆ. ಇದನ್ನೇ ಪುರಂದರರು ಮತ್ತೊಂದು ಕಡೆ–

**ಜೀವ ಜೀವಕೆ ಭೇದ ಸರ್ವತ್ರ ಜೀವ ಜೀವಕೆ ಭೇದವು ।**
**ಜೀವ ಜಡಕೆ ಜಡ ಜಡಕೆ ಭೇದ ಜಡ ಪರಮಾತ್ಮಗೆ** ॥ ಎಂದರು.

ಬ್ರಹ್ಮಾಂಡದಲ್ಲಿ ಅಂದರೆ ಭಗವಂತ ಸೃಷ್ಟಿ ವೈಚಿತ್ರವನ್ನು ಬಣ್ಣಿಸುವಾಗ ಶ್ರೀಮದಾಚಾರ್ಯರು ಆಂತರಿಕವಾಗಿ ಅಡಗಿರುವ ತತ್ತ್ವವನ್ನು ಹೇಳಿದ್ದು ಹೀಗೆ –

**'ಭಿನ್ನಾಶ್ಚ ಭಿನ್ನಧರ್ಮಾಶ್ಚ ಪದಾರ್ಥ ನಿಖಿಲಾ ಅಪಿ'** ಜಗತ್ತಿನ ಸಮಸ್ತ ಪದಾರ್ಥಗಳೂ ತನ್ನದೇ ಆದ ಧರ್ಮಗಳಿಂದ ಕೂಡಿದ್ದಾಗಿ ಭಿನ್ನವೇ ಆಗಿವೆ. ಹೀಗೆ ಅನಂತಾನಂತ ಜೀವರಾಶಿಗಳಲ್ಲಿ ಪರಸ್ಪರ ಭೇದವಿದ್ದು ಇದರಂತೆ ಜಡ ಪದಾರ್ಥಗಳಲ್ಲೂ ಭೇದವಿದ್ದು ಸರ್ವೋತ್ತಮನಾದ ಶ್ರೀಹರಿಯೇ ನಿಯಾಮಕನಾಗಿರುವುದಾಗಿ ತಿಳಿಯುವುದೇ ತತ್ತ್ವ. ಇದೇ ತಾರಕವೆಂದು ಹೇಳಿದರು. ಇದು ಅನಾದಿಕಾಲದಿಂದ ಅನಂತಕಾಲವೂ ಸತ್ಯವಾದದ್ದಾಗಿದೆ. ಇದನ್ನೇ **'ತಸ್ಮಾತ್ ಅನಾದಿಮಾನೇನ ಪ್ರಪಂಚೋ ಭೇದ ಪಂಚಕಃ'** ಎಂದು ಪ್ರಮಾಣಪುರಸ್ಸರವಾಗಿ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ. ಶ್ರೀಜಗನ್ನಾಥದಾಸರು ಜೀವ ಜಡಗಳಿಂದ ವಿಭಿನ್ನನಾದ ಭಗವಂತನನ್ನು–

**ಜೀವ ಜಡ ಸುವಿಲಕ್ಷಣನು ಎಂದರಿದು ನಿತ್ಯದಲಿ**
**ಈ ವಿರಿಂಚಾಂಡದೊಳು ಎಲ್ಲ ಠಾವಿನಲಿ ತಿಳಿದೈದು ಭೇದ**
**ಕಳೇವರದೊಳರಿತು ಅಚ್ಯುತನ ಪದವೈದು ಶೀಘ್ರದಲಿ** ॥

ಜಗತ್ತಿನ ವಸ್ತುಗಳ ಅಸ್ತಿತ್ವವೇ ಇತರ ವಸ್ತುಗಳಿಂದ ಭೇದ ಸೂಚಕ. ಇದರಲ್ಲಿ ತಾರತಮ್ಯವಿರುವುದು ಶಾಸ್ತ್ರಗಳ ಹಾಗೂ ಅನುಭವ ಸಿದ್ಧವಾದ ವಿಷಯ. ಈ ತತ್ತ್ವವನ್ನೇ ದಾಸರು ತಮ್ಮ ಉಗಾಭೋಗದಲ್ಲಿ ಸುಂದರವಾಗಿ ಸಂಗ್ರಹಿಸಿ ನಿರೂಪಿಸಿದರು. ಒಂದೇ ಮಾತಿನಲ್ಲಿ ದಾಸರು ನಿಶ್ಚಯಿಸಿ ಹೇಳಿದ ಮಾತು **'ಎರಡೂ ಒಂದಾಗದು ರಂಗ, ಎರಡು ಒಂದಾಗದು ಎಂದೆಂದಿಗೂ'** ಎಂದು. ಇದೇ ವಸ್ತುವಿನಲ್ಲಿರುವ ಭೇದ

ಮತ್ತು ತಾರತಮ್ಯವಾಗಿದೆ. ಹುಟ್ಟಿ ಬಂದ ಜೀವಿ ತಿಳಿಯಬೇಕಾದ್ದನ್ನೂ ಪುರಂದರರು ಮತ್ತೊಂದು ಉಗಾಭೋಗದಲ್ಲಿ–

**ಜೀವ ಜೀವಕೆ ಭೇದ ಜಡ ಜಡಕೆ ಭೇದ**

**ಜೀವ ಜಡ ಪರಮಾತ್ಮರಿಗೆ ಭೇದ**

**ಜೀವಜೀವ ಮುಕ್ತಾಮುಕ್ತರ ಭೇದ**

**ಸಂಸಾರದೊಳು ಭೇದ ಮುಕ್ತರೊಡೆಯ**

**ಹರಿಭಕ್ತರಾಧೀನ ಜಗತ್ಕರ್ತೃನೀ ಸಲಹಯ್ಯ ಪುರಂದರವಿಠಲ ॥**

ಕಡೆಯಲ್ಲಿ ದಾಸರು ಬೇಡಿದ್ದನ್ನು ನಾವೂ ಅನುಸಂಧಾನ ಪೂರ್ವಕ ಬೇಡೋಣ **'ಸಂತತ ವರದ ಶ್ರೀಪತಿ ಪುರಂದರವಿಠಲರೇಯ ಇಂತು ಜ್ಞಾನವು ನಿತ್ಯವಾಗಲಿ ಎನಗೆ'** ಎಂಬುದಾಗಿದೆ.

## ಶ್ರೀ ಕೃಷ್ಣಾರ್ಪಣಮಸ್ತು